ಬಂದಂಗಾಗಿ ತೋಟದ ಬದು ಮೇಲೆ ಕುಂತ. ಬೆಳಿಗ್ಗೆ ಏನೂ ತಿನ್ನದೇ ಹೋಗಿದ್ದ. ಹೊಟ್ಟೆ ಹಸಿತೀತ್ತು. ಆದರೆ, ಅನ್ನ ಬೇಕಿರಲಿಲ್ಲ. ಮನಸ್ಸು ಬೆಂಕಿಗೆ ಬಿದ್ದ ಕಾಗದವಾಗಿತ್ತು! ಆಸೆ ಪಟ್ಟು ತಗಂಡ ಬಟ್ಟೆ ತುಂಡಾನೋ, ಉದ್ದಾನೋ ಆದಂಗ್ ಆಗಿತ್ತು ಸಂಸಾರದ ಕತೆ. ಅವ್ವನೆದುರೂ ಹೇಳದ ಸ್ಥಿತೀಲಿ ಕೆಂಚೀರಪ್ಪ ಮೂರುದಿನ, ಒದ್ದಾಡಿದ್ದ. ವತ್ತಾರೆ ಎದ್ದಾಗ ಒಂದು ಮುದ್ದೆ ತಿಂದು ಅವ್ವ ಮನೆ ಬಿಟ್ರೆ ಹೊಲ್ದಾಗೆ ಮೂಲೆ ಮುಂಟುಕದಾಗೆ ತಪ್ಪಿಸಿಕೊಂಡ ಮೂಲಂಗಿ ಆರಿಸಿ ರಾಶಿ ಮಾಡೋಳು. ಮತ್ತೆ ಸೂರ್ಯ ಮುಳುಗಿದ ಮ್ಯಾಕೆ ಮನೆ ದಾರಿ ಹಿಡಿಯಾದು. ಅಂಗಳದಾಗೆ ಕುಂತು ಉಂಡು ಅಪ್ಪ ಜೀವ ಬಿಟ್ಟ ಜಗಲಿ ಮ್ಯಾಲೆ ಮಲಿಕ್ಕಂಡು ನಂದೂ ಹಂಗೇ ಜೀವ ಹೋಗಲಿ ಅಂತ ಅಪ್ಪ ಸತ್ತಾಗಲಿಂದ ಅನ್ನುತ್ತಲೇ ಎಲ್ಡು ಮಾರಿ ಹಬ್ಬ ನೋಡಿದ್ಲು!

ತ್ವಾಟದ ಬದು ಮೇಲಿಂದ ಎದ್ದು ಸೈಕಲ್ ತಳ್ಳುತ್ತಲೇ ತಿರುಗಿ ರೋಡಿಗಿಳಿದು ಈಗ ಹೊಂಟ! ಕೆಂಚೀರಪ್ಪನಿಗೆ ಆ ರಾತ್ರಿಯ ದೃಶ್ಯನ ಏನೆಂದರೂ ಕಣ್ಣಿಂದ ಹೋಗವಲ್ದು! ಆವತ್ಯಾಕೋ ಅವ್ವನ ಕೈಗೆ ಮೂಲಂಗಿ ರಾಶಿ ಜಾಸ್ತಿನೇ ಸಿಕ್ಕಿದ್ವು. ತರಕಾರಿ ಮಾರೋ ಚಂದ್ರನ ಅಂಗ್ಡಿಗ್ ಮೂಲಂಗಿ ತೂಕ ಮಾಡಿಕೊಟ್ಟು, ನಾಗವೇಣಿ ಬೈಲರ್ ಕೋಳಿ ತಿನ್ನಲ್ಲ ಅಂತ ಬಲ್ತ ಫಾರಂ ಕೋಳಿನ ಹಲಾಲ್ ಮಾಡ್ಸಿ ತಂದು ಹೆಂಡ್ತಿ ಕೈಗ್ ಕೊಟ್ಟು ನೀರು ಬಿಟ್ಟು ಬತ್ತೀನಂತ ಬಾವಿ ಕಡೆ ಹೋಗಿದ್ದ. ಕರೆಂಟು ಶಿಫ್ಟು. ಮೋಟಾರು ಬೇರೆ ಪದೇ ಪದೇ ರಿಪೇರಿಗೆ ಬಂದು ಕಾಡ್ತಿತ್ತು. ಮರಳಿ ಬಂದಾಗ ಆಗಲೇ ಕತ್ಲಾಗಿತ್ತು. ಅವ್ವ ಮುದ್ದೆ ಮುರೀತಾ ಏನೋ ಗೊಣಗ್ತಿದ್ಲು. ಏನಾತವ್ವ... ಸಾರ್ ಕಾರನ, ಮುದ್ದೆ ಗಂಟಾಗಿತಾ ಅಂದ. ‘ಮಗಾ, ಮುದ್ಯಾಗಳ ಗಂಟೆಂಗೋ ಆಗ್ತದೆ, ಸಂಸಾರದ ಗಂಟು ಬಿಗಿ ಮಾಡ್ಕಳೋ’ ಅಂದಿದ್ದು ಅರ್ಥವೇ ಅಗಿರಲಿಲ್ಲ. ಕೈಕಾಲ್ ಮುಖ ತೊಳೆದು ಉಣ್ಣಕ್ ಕುಂತ. ನಾಗವೇಣಿ ಮೊಬೈಲ್ ಹಿಡಿದೇ ಮುದ್ದೆ ಸಾರು ಬಡಿಸಿ ಸರಿದಳು. ಪೀಸು ಜಾಸ್ತಿ ಇದ್ವು. ಜಗೀತಾ ಮೂಲಂಗಿ ರೊಕ್ಕದ ಲೆಕ್ಕಾ ಮಾಡ್ತಾ ತಟ್ಟೆ ನೋಡಿದರೆ ತಿಳಿ ಖಾಲಿಯಾಗಿತ್ತು. ಸಾರಿಗೆ ಕೂಗಿದ. ಕೊಟ್ಟಿಗೆ ಕಡೆಯಿಂದ ದನಿ ಬಂತು ಬಂದೆ ಅಂತ. ದನಿಯಲ್ಲಿ ಏನೋ ಬದಲಾವಣೆ ಇತ್ತಾದರೂ ತಂದೆ ಅಂದ್ಲೋ, ಬಂದೆ ಅಂದ್ಲೋ ತಿಳೀದೇ ಕೋಳಿ ತೊಡೆ ಜಗಿದು ನುಂಗಿದರೂ ಸದ್ದಿಲ್ಲ. ಮೊಬೈಲ್‌ನಾಗೆ ಸತ್ಲೇನೋ ಅಂತ ಎಂಜಲ ಕೈಯಾಗೇ ಎದ್ದು ಕೊಟ್ಟಿಗೆ ಕಡೆ ಹೆಜ್ಜೆಯಿಟ್ಟ. ಎರಡೇ ಹೆಜ್ಜೆ ಹೋಗಿದ್ದು ಕೊಟ್ಟಿಗೆ ಗ್ವಾದನಿ ಮಗ್ಗುಲಲ್ಲಿ ನೆಟ್ಟಿದ್ದ ಚಪ್ಪಡಿಗಲ್ಲಿಗೆ ಆನಿಸಿ ನಿಂತ ಎರಡು ದೇಹಗಳು. ಇವಳ ಬೆತ್ತಲೆ ಅಂಡಿನ ಹಿಂಭಾಗದಲ್ಲಿ ಬೆಳ್ಳನೆ ಎರಡು ಕೈ ಲಂಗ ನೈಟಿ ಬಾಚಿ ಹಿಡಿದಿದ್ದವು. ಎತ್ತು ಬೇಸಾಯದ ಕೊನೆ ಹಂತದಲ್ಲಿ ಸೋತಂತಹ ದೇಹಗಳಾಗಿ ಕಂಡು ಸರಕ್ಕನೆ ಹಿಂದೆ ಹೆಜ್ಜೆ ಹಾಕಿ ಬಂದು ಬಿಟ್ಟ. ಕಣ್ಣಾಗ್ ನೀರು ತುಂಬಿ ಬಂದ್ವು; ಎದೆ ಬರ ಬಿದ್ದ ನೆಲವಾಗಿಬಿಡ್ತು! ಅವನ ಕಣ್ ಸೆಳೆದಿದ್ದು ಅಡ್ಡಗೋಡೆ ಮೇಲೆ ಮೊಬೈಲ್ ಬೆಳಕು. ಅದೂ ಕ್ಯಾಮೆರಾದ್ದು. ಬೆಳ್ಳನೆ ಬೆಳಕು ಬಿದ್ದು ಆ ದೇಹದ ಮಕ ಹೊಳೆಯುವಂತೆ ಮಾಡಿತ್ತು! ಬೆಳ್ಳನೆಯ ಆ ಕೈಗಳು ಸಣ್ಣ ಕಟಿಂಗು ಕಣ್ಣಾಗ್ ಅಚ್ಚೊತ್ತಿತ್ತು.

ಮುದ್ದೆಯಲ್ಲೇ ಕೈ ತೊಳೆದೆದ್ದ ಗಂಡನ ಬಗ್ಗೆ ತಲೆ ಕೆಡಿಸಿಕೊಳ್ಳದಾಕೆ ಬಚ್ಚಲಿಗ್ ಹೋಗಿ ಬಂದು ಮಲಗಿಬಿಟ್ಟಳು. ಕೆಂಚೀರಪ್ಪನ ಮನ

